ಹಾಸನ ನಗರಾಭಿವೃದ್ಧಿ ಮಂಡಳಿಯವರು ಮಾಡಿರುವ ಕಾಮಗಾರಿಗಳಲ್ಲಿ ಅಕ್ರಮಗಳು.

328(3125)

ಶ್ರೀ ಕೆ.ಹೆಚ್.ಹನುಮೇಗೌಡ(ಹಾಸನ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ನಗರಾಭಿವೃದ್ಧಿ ಮಂಡಳಿಯವರು ಮಾಡಿರುವ ಕಾಮಗಾರಿಗಳಲ್ಲಿ ಅನೇಕ ಅಕ್ರಮಗಳು ನಡೆದಿರುವ ಬಗ್ಗೆ ಸರ್ಕಾರಕ್ಕೆ ದೂರು ಬಂದಿರುವುದು ನಿಜವಲ್ಲವೇ?(ವಿವರ ಒದಗಿಸುವುದು)

ಆ) ನಡೆದಿರುವ ಕಾಮಗಾರಿಗಳ ಅಕ್ರಮಗಳ ಬಗ್ಗೆ ಸರ್ಕಾರವು ತನಿಖೆ ನಡೆಸುವುದೇ? (ವಿವರ ಒದಗಿಸುವುದು)

ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು):

ಅ) ಹಾಸನ ನಗರಾಭಿವೃದ್ಧಿ ಪ್ರಾಧಿಕಾರದವರು ಮಾಡಿರುವ ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ದೂರು ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ.ಹೆಚ್.ಹನುಮೇಗೌಡ: ಸ್ವಾಮಿ, ಹಾಸನ ನಗರಾಭಿವೃದ್ಧಿ ಮಂಡಳಿಯವರು ಮಾಡಿರುವ ಕಾಮಗಾರಿಗಳಲ್ಲಿ ಅನೇಕ ಅಕ್ರಮಗಳು ನಡೆದಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೇ? ಅದರ ಬಗ್ಗೆ ವಿವರಗಳನ್ನು ಕೊಡಿ ಎಂದು ನಾನು ಕೇಳಿದ್ದೇನೆ. ಯಾವುದೇ ದೂರು ಸರ್ಕಾರಕ್ಕೆ ಬಂದಿಲ್ಲ ಎಂದು ತಾವು ಹೇಳಿದ್ದೀರಿ. ಸ್ವಾಮಿ, ನಾನೇ ಕಾಗದ ಬರೆದಿದ್ದೇನೆ. ಈಗ ಒಂದೂವರೆ ತಿಂಗಳ ಹಿಂದೆ ಮೈಸೂರು ಡಿವಿಜನಲ್ ಎಂ.ಎಲ್.ಎ.ಗಳು ಮತ್ತು ನಗರಸಭೆ ಆಯುಕ್ತರುಗಳನ್ನು ಕರೆದು ಮೀಟಿಂಗ್ ಮಾಡಿದ್ದೀರಿ. ನಾನು ಆ ಸಭೆಯಲ್ಲೇ ಹೇಳಿದ್ದೆ. ಪ್ರೆಸ್ ಕಾನ್‌ಫರೆನ್ಸ್ ಕರೆದು ಹೇಳಿದೆ. ಏನೂ ದೂರು ಬಂದಿಲ್ಲವೆಂದು ಹೇಳಿದ್ದೀರಿ, ಯಾಕೆ? ನಿಮ್ಮ ಮೀಟಿಂಗ್‌ನಲ್ಲಿ ನಾನು ಹೇಳಲಿಲ್ಲವೆ? ನೀವು ಇರಲಿಲ್ಲವೇ, ನಿಮ್ಮ ಅಧಿಕಾರಿಗಳು ಇರಲಿಲ್ಲವೇ? ನಾನು ಆ ಮೀಟಿಂಗ್‌ನಲ್ಲಿ ಹೇಳಿದಾಗ ಹದಿನೈದು ದಿವಸದೊಳಗೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ. ಅದು ನಿಜವಲ್ಲವೇ? ನಾನು ಕಾಗದ ಬರೆಯಲಿಲ್ಲವೆ? ನಾನು ಪ್ರೆಸ್ ಕಾನ್‌ಫರೆನ್ಸ್ ಕರೆದು ಹೇಳಲಿಲ್ವಾ? ಅದು ಗಮನಕ್ಕೆ ಬಂದಿಲ್ಲವೆಂದು ಹೇಳಿದರೆ ಇನ್ನು ನಾನು ಏನು ಮಾಡಬೇಕಾಗುತ್ತದೆ ಎಂದು ದಯಮಾಡಿ ಹೇಳಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಸನ್ಮಾನ್ಯ ಅಧ್ಯಕ್ಷರೇ, ಅವರು ಬಹಳ ನಿರ್ದಿಷ್ಟವಾಗಿ ಕೇಳಿದ್ದಾರೆ. ಹಾಸನ ನಗರಾಭಿವೃದ್ಧಿ ಮಂಡಳಿಯವರು ಮಾಡಿರುವ ಕಾಮಗಾರಿಗಳಲ್ಲಿ ಅನೇಕ ಅಕ್ರಮಗಳು ನಡೆದಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿರುವುದು ನಿಜವಲ್ಲವೇ ಎಂದು ಕೇಳಿದ್ದಾರೆ. ಅದು ಈಗ ದೂರು ನೀಡಿದ್ದಾರೆಯೇ? ಅಥವಾ ಹಿಂದೆ ದೂರು ನೀಡಿದ್ದಾರೆಯೇ? ಅದು ಎಷ್ಟನೇ ಇಸವಿಯಲ್ಲಿ ಎಂದು ನನಗೆ ಗೊತ್ತಾಗಲಿಲ್ಲ. ಅವರು ನಿರ್ದಿಷ್ಟವಾಗಿ ಕೇಳಿದ್ದರೆ ನಿರ್ದಿಷ್ಟವಾಗಿ ಉತ್ತರ ಕೊಡಬಹುದಿತ್ತು. ಈಗ ನಮ್ಮ ಸರ್ಕಾರ ಬಂದಮೇಲೆ ಆ ರೀತಿ ಯಾವುದೇ ರೀತಿಯಿಂದ ಅಕ್ರಮಗಳಂತೂ ನಡೆದಿಲ್ಲ. ಅದು ಹಿಂದೆ ನಡೆದಿದ್ದರೆ ಎಷ್ಟನೇ ಇಸವಿಯಲ್ಲಿ ನಡೆದಿದೆ ಎಂದು ಪ್ರಶ್ನೆ ಕೇಳಿದರೆ ನಾನು ಸರಿಯಾದ ಉತ್ತರವನ್ನು ಕೊಡಬಹುದು.

ಶ್ರೀ ಕೆ.ಹೆಚ್.ಹನುಮೇಗೌಡ: ಸ್ವಾಮಿ, ಹಾಸನ ನಗರಾಭಿವೃದ್ಧಿ ಮಂಡಳಿಯಲ್ಲಿ ನಡೆದಿರತಕ್ಕಂಥಾದ್ದು, ಅದು ಹಿಂದಿನ ಸರ್ಕಾರವಾಗಲಿ, ಮುಂದಿನ ಸರ್ಕಾರವಾಗಲೀ, ಅವರು ಬಡವರು ಕೊಟ್ಟ ದುಡ್ಡನ್ನು ನುಂಗಿ ನೀರು ಕುಡಿದಿದ್ದಾರೆ. ಅದಕ್ಕೆ ಸರ್ಕಾರ ಜವಾಬ್ದಾರ ಆಗಬೇಕು. ನೀವು ಸಂಬಂಧಪಟ್ಟ ಮಂತ್ರಿಗಳು. ನಿಮಗೆ ಗೊತ್ತಿಲ್ಲದಿದ್ದರೆ ಇನ್ನೊಂದು ಸಾರಿ ವಿವರವಾಗಿ ಹೇಳುತ್ತೇನೆ. ನೀವು ಮರೆತುಬಿಟ್ಟಿದ್ದೀರಿ ಎಂದು ಕಾಣುತ್ತದೆ. ಅಲ್ಲಿ ಕಂಟ್ರಾಕ್ಟರ್ ಮಾಡಿರುವುದು ಹೇಗೆ ಎಂದರೆ ಒಂದು ಡೀವಿಯೇಷನ್ ರೋಡ್ ಮಾಡಿದ್ದಾರೆ. ಅದಕ್ಕೆ ಒಂದು ಲಕ್ಷ, 24 ಸಾವಿರ ರೂಪಾಯಿಗಳು ಖರ್ಚಾಗಿದೆ. ಆ ರೋಡ್ ಮೇಲೆ ವಾಹನಗಳು, ಮನುಷ್ಯರು ಅಥವಾ ಪ್ರಾಣಿಗಳು ಹೋಗುವುದಕ್ಕೆ ಆಗುವುದಿಲ್ಲ. ದನಗಳನ್ನು ಹೊಡೆದುಕೊಂಡು ಹೋಗುವುದಕ್ಕೆ, ಆಡುಕುರಿಗಳು ಹೋಗುವುದಕ್ಕೂ ಆಗುವುದಿಲ್ಲ. ಅಂತಹ ರೋಡ್ ಆಗಿ ಎರಡು-ಮೂರು ವರ್ಷಗಳಾಗಿದೆ. ಇದರ ಬಗ್ಗೆ ಹಾಸನ ಪುರಪ್ರಮುಖರು ಕಂಪ್ಲೇಂಟ್ ಕೊಟ್ಟಿದ್ದಾರೆ, ಕಾಗದ ಬರೆದಿದ್ದಾರೆ. ನಾನು ಕೂಡ ಪ್ರೆಸ್ ಕಾನ್‌ಫೆರೆನ್ಸ್ ಕರೆದು ಹೇಳಿದ್ದೇನೆ. ಕಾಗದ ಬರೆದಿದ್ದೇನೆ, ತಾವು ಕರೆದಿದ್ದ ಮೀಟಿಂಗ್‌ನಲ್ಲಿ ಕೂಡ ಹೇಳಿದ್ದೇನೆ. ಇದು ಒಂದು ಆಯಿತಾ? ಇನ್ನು, ಎರಡನೆಯದು

11.10 ಎಎಂ

ಆ ರಸ್ತೆಯನ್ನು ನಾನು ಹೋಗಿ ನೋಡಿದೆ. ಇಲ್ಲಿಂದ ಅಷ್ಟು ದೂರ ನಡೆದರೆ ನೀವು ಏನೂ ಕೇಳಿದರೂ ಕೊಡುತ್ತೇನೆ.

ಅಧ್ಯಕ್ಷರು: ನಾನು ಅಲ್ಲಿ ನಡೆದರೆ ನೀವು ರಾಜೀನಾಮೆ ಕೊಡುತ್ತೀರಾ?

ಶ್ರೀ ಕೆ.ಹೆಚ್.ಹನುಮೇಗೌಡ: ಕೊಡುತ್ತೇನೆ ಸ್ವಾಮಿ. ಹೀಗೆ ಮಾಡಿದರೆ ಸರಿಯಾಗುತ್ತದೆ ಏನೋ ನೋಡೋಣ... ಇದು ಸರ್ಕಾರಕ್ಕೆ ಶೋಭೆ ತರುತ್ತದೆಯೇ?

ಮಾನ್ಯ ಮಂತ್ರಿಗಳಿಗೆ ಶೋಭೆ ತರುತ್ತದೆಯೇ? ಜನ ನಮಗೆ ಓಟು ಕೊಟ್ಟಿದ್ದಾರೆ. ನಾನು ಅವರಿಗೆ ಏನು ಹೇಳಲಿ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು): ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಹೇಳಲಿ. ಯಾವ ಕಮೀಷನರ್ ಇದ್ದಾಗ ಎಷ್ಟನೇ ಇಸವಿಯಲ್ಲಿ ಅದು ಆಗಿದೆ? ಈಗ ನಾನು 20 ವರ್ಷದ ಹಿಂದೆ ಆಗಿರುವ ರಸ್ತೆಯ ಬಗ್ಗೆ ಎನ್‌ಕ್ವೈರಿ ಮಾಡುವುದಕ್ಕೆ ಹೇಗೆ ಸಾಧ್ಯ? ತಾವೇ ಸ್ಪೆಸಿಫಿಕ್ ಆಗಿ ಹೇಳಿದರೆ ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಥವಾ ಇಂತಹ ಕಮೀಷನರ್ ಇದ್ದಾಗ ಆಗಿತ್ತು ಎಂದು ಹೇಳಿ, ಇಂತಹ ಅಧ್ಯಕ್ಷರು ಇದ್ದಾಗ ಆಗಿರತಕ್ಕದ್ದು ಎಂದು ಹೇಳಿದರೆ ನಾನು ಎನ್‌ಕ್ವೈರಿ ಮಾಡುವುದಕ್ಕೆ ನನಗೂ ಸುಲಭವಾಗುತ್ತದೆ. ನಾನು ಎನ್‌ಕ್ವೈರಿ ಮಾಡುವುದಿಲ್ಲವೆಂದು ಹೇಳುವುದಿಲ್ಲ. ತಾವು ಹೇಳಿರತಕ್ಕದ್ದು ಸತ್ಯವಿರಬಹುದು.

ಶ್ರೀ ಕೆ.ಹೆಚ್.ಹನುಮೇಗೌಡ: ನಾನು ಇದನ್ನು ಡಿವಿಜನಲ್ ಕಾನ್ಫರೆನ್ಸ್ ಮೀಟಿಂಗ್‌ನಲ್ಲಿ ಹೇಳಲಿಲ್ಲವಾ? ವಿಚಾರಣೆ ಮಾಡುತ್ತೇನೆಂದು ಹೇಳಿದ್ದಾರೆ, ಅದಕ್ಕೆ ಹೇಳುತ್ತೇನೆ.

ಅಧ್ಯಕ್ಷರು: ನೀವು ಡಿವಿಜನಲ್ ಕಾನ್ಫರೆನ್ಸ್‌ನಲ್ಲಿ ಹೇಳುವುದಲ್ಲ, ಇಲ್ಲಿ ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಬೇಕು.

ಶ್ರೀ ಕೆ.ಹೆಚ್.ಹನುಮೇಗೌಡ: ಹೋಗಲಿ ಬಿಡಿ, ವಿಚಾರಣೆ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಡೀವಿಯೇಷನ್ ರಸ್ತೆಯಲ್ಲಿ ಒಂದು ಹಳ್ಳ ಹರಿಯುತ್ತದೆ. ಕಂಟ್ರಾಕ್ಟರ್ ಭಾರೀ ಪ್ರಭಾವಶಾಲಿ, ಅವರನ್ನು ಯಾರೂ ಮುಟ್ಟುವ ಹಾಗೆ ಇಲ್ಲ ಅವರಿಗೆ ಹೇಳುವ ಹಾಗೆ ಇಲ್ಲ ಕೇಳುವ ಹಾಗೆ ಇಲ್ಲ. 5 ಲಕ್ಷ ರೂಪಾಯಿ 'ಯು' ಪೈಪ್ ಹಾಕಿದ್ದಾರೆ. ನಾನೇ ಇಂಜಿನಿಯರ್ ಕರೆದುಕೊಂಡು ಹೋಗಿ ಅಲ್ಲಿ ಇಳಿದು ನೋಡಿದೆ. 35 ಲಕ್ಷ ರೂಪಾಯಿಗಳ ಬಿಲ್ ಕೊಟ್ಟಿದ್ದಾರೆ. ನಾವು ಯಾರೂ ಮಾತನಾಡುವಹಾಗೆ ಇಲ್ಲ. ಈ ದರೋಡೆ ಯಾವುದಾದರೂ ಕಾಲದಲ್ಲಿ ನಡೆದಿತ್ತಾ? ಅದು ಒಂದು ಆಯಿತು. ಡೀವಿಯೇಷನ್ ರಸ್ತೆಯಾಗುತ್ತದೆಂದು ಊರೆಲ್ಲ ವದಂತಿ ಹಬ್ಬಿತು. ಕೆಲವು ಪ್ರಭಾವಿ ಕಂಟ್ರಾಕ್ಟರ್‌ಗಳಿಗೆ ಇನ್ಸ್ಪಿರೇಷನ್ ಬಂದು ಎಲ್ಲೆಲ್ಲಿ ಹಳ್ಳ ಸಿಕ್ಕಿತ್ತು ಅಲ್ಲೆಲ್ಲ ಬಂಡ್ ಹಾಕಿ ಬಿಲ್ ತೆಗೆದುಕೊಂಡರು. ಪ್ಲಾನ್ ಇಲ್ಲ, ಎಸ್ಟಿಮೇಟ್ ಇಲ್ಲ, ವರ್ಕ್ಸ್ ಆರ್ಡರೂ ಇಲ್ಲ. ಇದು ನಡೆದಿರುವ ನಿಜ ಸಂಗತಿ. ಎರಡು ಗುಡ್ಡೆ ನಾನೇ ನೋಡಿದೆ. ಪ್ಲಾನ್ ಇಲ್ಲ, ಎಸ್ಟಿಮೇಟ್ ಇಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರು ಪ್ರಶ್ನೆ ಕೇಳಿ.

ಶ್ರೀ ಕೆ.ಹೆಚ್.ಹನುಮೇಗೌಡ: ನಾನು ಪ್ರಶ್ನೆ ಕೇಳಿದರೆ ಮಾನ್ಯ ಮಂತ್ರಿಗಳು ಡೇಟ್

ಕೊಡಿ ಅದು ಕೊಡಿ ಇದು ಕೊಡಿಯೆಂದು ಕೇಳುತ್ತಾರೆ. ನಾನೇ ಆಗಿದ್ದರೆ ತಕ್ಷಣ ಯಾರನ್ನಾದರೂ ಕಳುಹಿಸಿ ಯಾವ್ಯಾವ ಕೆಲಸ ಆಗಿದೆ ನೋಡಿಕೊಂಡು ಬನ್ನಿಯೆಂದು ಕಳುಹಿಸುತ್ತಿದ್ದೆ, ಇದಕ್ಕೆ ಡೇಟ್ ಬೇಕಾ ಸ್ವಾಮಿ?

ಶ್ರೀ ಚಂದ್ರಕಾಂತ ಬೆಲ್ಲದ್: ಎಲ್ಲಾ ಮಾಹಿತಿಯನ್ನು ಮಾನ್ಯ ಸದಸ್ಯರು ಕೊಡುವುದಾದರೆ ನಿಮ್ಮ ಅಧಿಕಾರಿಗಳ ಕಡೆಯಿಂದ ಮಾಹಿತಿಯನ್ನು ತರಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆ? ನಿಮ್ಮ ಅಧಿಕಾರಿಗಳ ಕಡೆಯಿಂದ ಮಾಹಿತಿಯನ್ನು ತರಿಸಿಕೊಳ್ಳಬೇಕು.

ಶ್ರೀ ಸಿ.ಚನ್ನಿಗಪ್ಪ: ಆ ಪ್ರಭಾವಿ ಕಂಟ್ರಾಕ್ಟರ್ ಯಾರು ಅಂತ ಹೇಳಬೇಕು.

ಅಧ್ಯಕ್ಷರು: ಇದು ಹಾಸನ ಪಟ್ಟಣಕ್ಕೆ ಸಂಬಂಧಪಟ್ಟಿದ್ದು.

ಶ್ರೀ ಕೆ.ಹೆಚ್.ಹನುಮೇಗೌಡ: ಅವರ ಕಡೆಯವರೇ ಸ್ವಾಮಿ.

ಶ್ರೀ ಎಸ್.ಸುರೇಶ್‌ಕುಮಾರ್: ನಾನು ಬಹಳ ಹೊತ್ತಿನಿಂದ ಯೋಚಿಸುತ್ತಿದ್ದೆ ಏಕೆ ಮಾನ್ಯ ಚನ್ನಿಗಪ್ಪನವರು ಇನ್ನೂ ಎದ್ದು ನಿಂತಿಲ್ಲವೆಂದು? ಮಾನ್ಯ ಹನುಮೇಗೌಡರು ಎದ್ದುನಿಂತರೆ ಮಾನ್ಯ ಚನ್ನಿಗಪ್ಪನವರು ಎದ್ದು ನಿಲ್ಲಬೇಕು!

ಅಧ್ಯಕ್ಷರು: ಮಾನ್ಯ ಮಂತ್ರಿಗಳು, ಶಾಸಕರು ಪ್ರಶ್ನೆ ಕೇಳಿದ್ದಕ್ಕೆ ಡೀಟೈಲ್ಸ್ ವಿವರ ತರಿಸಿಕೊಂಡು ಅದರ ಬಗ್ಗೆ ಎನ್‌ಕ್ವೈರಿ ಮಾಡಿ.

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಮಾನ್ಯ ಹನುಮೇಗೌಡರು ಹಾಸನ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ, ಅವರು ಪ್ರಶ್ನೆ ಕೇಳುತ್ತಾರೆ. ಕೆಲವರು ದಾವೂಸ್‌ಗೆ ಹೋದರೂ ಹೊಳೇನರಸೀಪುರನೇ ದೆಹಲಿಗೆ ಹೋದರೂ ಹೊಳೆನರಸಿಪುರನೇ! ಇದಕ್ಕೆ ಏನು ಮಾಡುತ್ತೀರಾ?

ಶ್ರೀ ಸಿ.ಚನ್ನಿಗಪ್ಪ; ಅದಕ್ಕಾಗಿ ಕೇಳಿದೆ, ಆ ಪ್ರಭಾವಿ ಕಂಟ್ರಾಕ್ಟರ್ ಹೆಸರೇನು?

ಶ್ರೀ ಕೆ.ಹೆಚ್.ಹನುಮೇಗೌಡ: ನಾನು ಹೆಸರು ಹೇಳಿದೆನಾ?

ಶ್ರೀ ಸಿ.ಚೆನ್ನಿಗಪ್ಪ; ನೀವು ಹೇಳುತ್ತೀರಾ ಎಂದು ಕೇಳಿದೆ.

ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ಸಾಧಾರಣ ಮನುಷ್ಯರು ಯಾರೂ ಇಂತಹ ಕೆಲಸ ಮಾಡುವುದಿಲ್ಲ. ಇಂತಹ ಡಕಾಯಿತಿ ಕೆಲಸ ಮಾಡಬೇಕಾದರೆ ಭಾರೀ ಕುಳ ಇರಬೇಕು. ಮನುಷ್ಯರು ಕಾನ್ಸಿಯೆನ್ಸ್ ಇರುವವರು ದೇವರ ಬಗ್ಗೆ ಭಯಭೀತಿ ಇರುವವರು ಜನಗಳ ಬಗ್ಗೆ ಅನುಕಂಪ ಇರುವವರು ಡಕಾಯಿತಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಭಾರೀ ಕುಳ ಆಗಿರತಕ್ಕವರು ಮಾಡಿದ್ದಾರೆ ಅವರ ಬಗ್ಗೆ

ವಿವರವಾಗಿ ಇನ್ನೊಂದು ಸಂದರ್ಭದಲ್ಲಿ ನಾನು ಹೇಳುತ್ತೇನೆ. ಎರಡು ತಿಂಗಳ ಹಿಂದೆ ಗೌರಿಕೊಪ್ಪಲು ಬಡಾವಣೆಯಲ್ಲಿ ನಾನು ಹೋಗುತ್ತಿದ್ದೆ. ರಸ್ತೆಯಲ್ಲಿ ಹರಡಿದ್ದ ಜಲ್ಲಿಯನ್ನು ತೆಗೆಯುತ್ತಿದ್ದರು. ಸ್ಥಳದಲ್ಲಿ ಇದ್ದವನೊಬ್ಬನನ್ನು ಕರೆದು ಇದು ಏಕಪ್ಪಾ ಹೀಗೆ ಮಾಡುತ್ತೀರಿ ಎಂದು ಕೇಳಿದೆ. ಅವನು ಹೇಳಿದ ಜಲ್ಲಿಯನ್ನು ಹರಡಿ ಮೂರು ತಿಂಗಳು ಆಯಿತು ಎಂದು. ಆಮೇಲೆ ಇಂಜಿನಿಯರ್ ಆಫೀಸಿನಲ್ಲಿ ಹೋಗಿ, ಮೂರು ತಿಂಗಳಿನಲ್ಲಿ ಹರಡಿದ ಜಲ್ಲಿಯನ್ನು ತೆಗೆಯುತ್ತಿದ್ದಾರೆ ಏಕೆ ಎಂದು ಕೇಳಿದೆ. ಇಲ್ಲೊಂದು ಪದ್ಧತಿ ಇದೆ ಕೆಲವು ಕಂಟ್ರಾಕ್ಟರ್‌ಗಳಿಗೆ ಕೆಲಸ ಮಾಡುವುದಕ್ಕೆ ಪ್ಲಾನ್ ಎಸ್ಟಿಮೇಟ್ ಏನೂ ಕೇಳುವ ಹಾಗೆ ಇಲ್ಲ. ಅವರವರೇ ರಸ್ತೆ ಫಾರ್ಮ್ ಮಾಡುತ್ತಾರೆ, ಆಮೇಲೆ ಜಲ್ಲಿಯನ್ನು ಕಲೆಕ್ಟ್ ಮಾಡುತ್ತಾರೆ, ಆಮೇಲೆ ಅದನ್ನು ತೆಗೆದು ಹಾಕುತ್ತಾರೆಂದು ಹೇಳಿ, ಕನ್ಸಲ್ಟೇಷನ್ ಬಿಲ್ ತೆಗೆದುಕೊಂಡು ಆಫೀಸಿಗೆ ಬರುತ್ತಾರೆ, ಅವರಿಗೆ ನಾವು ಕೊಡಲೇಬೇಕು. ಅವರನ್ನು ಒಂದು ನಿಮಿಷ ನಿಲ್ಲಿಸಿದರೆ ನಮಗೆ ಎಡವಟ್ಟು ಸ್ವಾಮಿ ಅಂದ. ಈ ತರಹ ಕೆಲಸಗಳಾಗಿವೆ. ಪ್ಲಾನ್, ಎಸ್ಟಿಮೇಟ್, ವರ್ಕ್ಸ್ ಆರ್ಡರ್, ಟೆಂಟರ್ ಏನೂ ಇಲ್ಲ. ಇದು ಕೆಲವರಿಗೆ ಮಾತ್ರ ಎಲ್ಲರಿಗೂ ಅಲ್ಲ. ಕೆಲವರು ಕಷ್ಟಪಟ್ಟು ಕೆಲಸ ಮಾಡಿ ಜೀವನ ಮಾಡುವವರೂ ಸಹ ಇದ್ದಾರೆ. ಆದರೆ ಅವರೇ ಈ ತರಹ ಹತ್ತಾರು ಕೆಲಸ ಮಾಡಿ ಪ್ಲಾನ್, ಎಸ್ಟಿಮೇಟ್ ವರ್ಕ್ಸ್ ಆರ್ಡರ್ ಇಲ್ಲದೆ ಬಿಲ್ ಮಾಡಿ ಪೇಮೆಂಟ್‌ಗಳಾಗಿವೆ. ಅಂತಹ ಕೆಲಸಗಳಿಗೆ ಬಿಲ್ ಕೊಡಬೇಡಿಯೆಂದು ನಿಲ್ಲಿಸಿದ್ದೇ ಮಾರ್ಚಿ 31ನೇ ತಾರೀಖು ಹೆಬ್ಬೆಟ್ಟು ಒತ್ತಿ ಬಿಲ್ ಪಾಸ್ ಮಾಡಿಕೊಂಡು ಹಂಚಿಕೊಂಡಿದ್ದಾರೆ.

ಅಧ್ಯಕ್ಷರು: ಮಾನ್ಯ ಹನುಮೇಗೌಡರು ನಿಂತವರು ಆಗಿನಿಂದ ಕುಳಿತೇ ಇಲ್ಲ.

ಶ್ರೀ ಕೆ.ಹೆಚ್.ಹನುಮೇಗೌಡ: ವಿಚಾರವನ್ನು ಹೇಳಬೇಕಲ್ಲ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರವನ್ನು ಎನ್‌ಕ್ವೈರಿ ಮಾಡಿಸುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಮಾನ್ಯ ಸೋಮಶೇಖರ್‌ರವರೆ, ತಮ್ಮದು ಎರಡು ಪ್ರಶ್ನೆಗಳಿವೆ. ಆಮೇಲೆ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ, ಅದು ಲ್ಯಾಪ್ಸ್ ಆಗುವುದಿಲ್ಲ. ತಾವು ಮತ್ತು ಮಾನ್ಯ ಉಮೇಶ್ ಕತ್ತಿಯವರು ಇಬ್ಬರೂ ಇನ್‌ಟೈಮ್‌ಗೆ ಬಂದಿರುವುದರಿಂದ ಈಗ ಪ್ರಶ್ನೋತ್ತರ ವೇಳೆ ಮುಗಿದಿರುವುದರಿಂದ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ, ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಬಿ.ಸೋಮಶೇಖರ್: ತಾವು ಇಷ್ಟು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುವುದಾದರೆ ಇದೇ ಶಿಸ್ತನ್ನು ಮುಂದುವರೆಸಿ. ಒಂದು ಸಾರಿ ಸದಸ್ಯರ ಹೆಸರನ್ನು ಕರೆದಾಗ ಸದಸ್ಯರು ಇಲ್ಲದಿದ್ದರೆ, ಅದನ್ನು ಹೆಲ್ಡ್‌ಓವರ್ ಮಾಡಿದ್ದರೆ